**ಎಲ್ಲೆಂದರಲ್ಲಿ ಸಾಹಿತ್ಯದ ಪುಟ್ಟ ಕದನಕ್ಕೆ ಯಾವ ಕ್ಷಣದಲ್ಲೂ ಸಿದ್ಧರಾಗಿ ನಿಂತ ಪಟುಭಟರಂತೆ ಕಾಣುತ್ತಿದ್ದ ಭಟ್ಟರು ಹಾಗೇ ಸುಮ್ಮನೆ ಒಂದಷ್ಟು ಜನರ ಅಸಮಾಧಾನವನ್ನೂ ಗಳಿಸಿಕೊಂಡರು.**



ಪರಿಷ್ಕರಿಸುವುದು... ಇವೆಲ್ಲವನ್ನೂ ಅವರು ಶ್ರಮವಹಿಸಿ ಮಾಡಿದರು. ಆ ಬಗೆಯ ಸಿದ್ಧತೆಗಳ ಒಂದು ಉದಾಹರಣೆಯಾಗಿ ಅವರ 'ಶೇಕ್‌ಸ್ಪಿಯರ್ ಕೈಪಿಡಿ' ಕೃತಿಯನ್ನೂ, ಶೇಕ್‌ಸ್ಪಿಯರನ ಒಂದು ನಾಟಕದ ಅನುವಾದವನ್ನೂ ಗಮನಿಸಬಹುದು. ತಾನು ಮಾಡಿದ ಕಾವ್ಯಾನುವಾದಗಳು ಭಟ್ಟರಿಗೂ ಸಾಕಷ್ಟು ಸಮಾಧಾನ ಕೊಟ್ಟವೆಂದು ತೋರುತ್ತದೆ.

ಶಿಶುನಾಳ ಶರೀಫರ ಗೀತಗಳ ಜನಪ್ರಿಯ ಆವೃತ್ತಿ ಸಿದ್ಧಪಡಿಸಿ ಎನ್ನೆಸ್ಸೆಲ್ ತಮ್ಮ ಹಿಂದಣ ಕವಿಪರಂಪರೆಗೊಂದು ವಿಶೇಷ ಋಣಸಂದಾಯ ಮಾಡಿದರು. ಮರೆವೆಗೆ ಸಂದುಬಿಡಬಹುದಾಗಿದ್ದ ತತ್ತ್ವಪದಗಳ ಮಹಾನ್ ಕವಿಯನ್ನು ದೊಡ್ಡ ರೀತಿಯಲ್ಲಿ ಅವರು ಮುನ್ನೆಲೆಗೆ ತಂದರು. ತಮ್ಮ ಹಾಡುಗಾರ ಗೆಳೆಯ ಸಿ. ಅಶ್ವತ್ಥ ಮತ್ತಿತರ ಹಾಡುಗಾರರ ಕೊರಳಿಂದ ನಾಡಿನಾದ್ಯಂತ ಶರೀಫರ ಹಾಡುಗಳು ಮಾರ್ದನಿಸುವಂತೆ ಮಾಡಿದರು. ಜನರು ಅವರನ್ನು ಶರೀಫ ಭಟ್ಟರೆಂದು ಕರೆದು ಗೌರವಿಸಿದ್ದೂ ಇದೆ, ಅಂಥ ಅನುಭಾವಿಯ ಕವಿತೆಗಳನ್ನು ಪರಿಷ್ಕರಿಸಲು ಇವರ್‍ಯಾರು ಎಂದು ಆಕ್ಷೇಪಿಸಿದ್ದೂ ಇದೆ.

ಕನ್ನಡ ಕಾವ್ಯಮೀಮಾಂಸೆಗೆ ಭಟ್ಟರು ಕೊಟ್ಟ ಅನನ್ಯ ಕೊಡುಗೆ 'ಕಾವ್ಯ ಪ್ರತಿಮೆ'. ಈ ವಿದ್ವದ್ ಕೃತಿಯಲ್ಲಿ ಈ ಹಿರಿಯ ಕವಿ, ಮೀಮಾಂಸಕರು ಕಾವ್ಯ ಪ್ರತಿಮೆಗಳ ಕುರಿತ ಚಿಂತನೆಗಳ ಒಂದು ಸಮಗ್ರ ಅಧ್ಯಯನ ನಡೆಸಿದ್ದಾರೆ. ಈ ಜಿಜ್ಞಾಸೆ ನಿಜವಾಗಿ ಅವರ ಇಡೀ ಜೀವಿತ ಕಾಲದ ಕಾರ್ಯ ಅನ್ನಬೇಕು. ತೀ.ನಂ.ಶ್ರೀಯವರ 'ಭಾರತೀಯ ಕಾವ್ಯ ಮೀಮಾಂಸೆ'ಯ ಬಳಿಕ ಕನ್ನಡದಲ್ಲಿ ಬಂದ ಒಂದು 'ಆಚಾರ್ಯ ಕೃತಿ' ಇದೆಂದು ಲೇಖಕ ಯು.ಆರ್. ಅನಂತಮೂರ್ತಿಯವರು ಗುರುತಿಸಿದರು. ಪ್ರತಿಮಾ ಸೃಷ್ಟಿ ಶ್ರೇಷ್ಠ ಕಾವ್ಯದ ಪ್ರಧಾನ ಲಕ್ಷಣವೆಂದು ಸಾಹಿತ್ಯ ವಿದ್ವಾಂಸರು ಕಳೆದ ಒಂದೆರಡು ಶತಮಾನಗಳಿಂದ